


International Journal of Kannada Research
www.kannadajournal.com


**ISSN: 2454–5813**
IJKR 2018; 4(4): 07-10
© 2018 IJKR
www.kannadajournal.com
Received: 02-08-2018
Accepted: 03-09-2018

**ಡಾ. ನಾಗಭೂಷಣಬಗ್ಗನಡು**
ಸಹಾಯಕ ಪ್ರಾಧ್ಯಾಪಕ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು

**Correspondence**
**ಡಾ. ನಾಗಭೂಷಣಬಗ್ಗನಡು**
ಸಹಾಯಕ ಪ್ರಾಧ್ಯಾಪಕ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು

# ಕರ್ನಾಟಕ ಏಕೀಕರಣ ಚಳವಳಿ ಮತ್ತು ಮಹಿಳೆ

**ಡಾ. ನಾಗಭೂಷಣಬಗ್ಗನಡು**

ಕಳೆದ ಶತಮಾನದಲ್ಲಿ ಘಟಿಸಿದ ಚರಿತ್ರೆಯ ಸಂಗತಿಗಳೆಂದರೆ, ಒಂದು ರಾಷ್ಟ್ರೀಯ ಪರಿಪ್ರೇಕ್ಷ್ಯದಲ್ಲಿ ಸ್ವಾತಂತ್ರ್ಯ ಚಳವಳಿ; ಪ್ರಾದೇಶಿಕವಾಗಿ ಕರ್ನಾಟಕ ಏಕೀಕರಣ ಚಳವಳಿ. ಮೊದಲನೆಯದು ಪರಕೀಯ ಗುಲಾಮಗಿರಿಯಿಂದ ಬಿಸಿಕೊಳ್ಳುವ ಆಂದೋಲನವಾದರೆ; ಮತ್ತೊಂದು ಭಾಷಿಕ ಆಧಾರದ ಮೇಲೆ ಭೌಗೋಳಿಕ ಮತ್ತು ಸಾಂಸ್ಕೃತಿಕವಾಗಿ ಒಂದಾಗುವ ಚಳವಳಿ ಈ ಎರಡು ಆಂದೋಲನಗಳನ್ನು ಕರ್ನಾಟಕದ ಚಾರಿತ್ರಿಕ ಸಂದರ್ಭದಲ್ಲಿ ಮುಖ್ಯವಾದ ಸಂಗತಿಗಳು.

ಈ ಆಂದೋಲನಗಳಲ್ಲಿ ಮಹಿಳೆ ಸಕ್ರಿಯವಾಗಿ ಭಾಗವಹಿಸಿದ್ದಾಳೆ. ಹೋರಾಟಗಳಿಗೆ ತನ್ನ ತನುಮನ ಧನವನ್ನು ಅರ್ಪಿಸಿಕೊಂಡಿದ್ದಾಳೆ. ಆದರೆ ಅವು ಚರಿತ್ರೆಯಲ್ಲಿ ದಾಖಲಾಗಿರುವುದು' ಇಲ್ಲಾ ಆಕೆಯ ಪ್ರತಿನಿಧಿಕರಣವು ಕಣ್ಮರೆಯಾಗಿವೆ. ಎಂಬುದು ಕುತೂಹಲ. ಸಿಮೋನ್ ದ.ಬೋವ ತನ್ನ ಕೃತಿಯಾದ 'ಸೆಕೆಂಡ್ ಸೆಕ್ಸ್'ನಲ್ಲಿ ಹೀಗೆ ಹೇಳುತ್ತಾಳೆ. 'ಮಹಿಳೆಗೆ ಚರಿತ್ರೆಗಳು ಇಲ್ಲ, ಇದ್ದರು ಅವು ಕಳೆದು ಹೋಗಿದೆ. ಹಾಗಾಗಿ ಕಳೆದು ಹೋಗಿರುವ ಈ ಚರಿತ್ರೆಗಳನ್ನು ಮತ್ತೆ ಕಟ್ಟುವುದು ಅನಿವಾರ್ಯವಾಗಿದೆ. ಯಾಕೆಂದರೆ ನಮ್ಮ ಚರಿತ್ರೆಗಳಲ್ಲಿ ಈ ನಿರ್ಲಕ್ಷ್ಯಕ್ಕೆ ಒಳಗಾದ ಮಹಿಳೆ ಮತ್ತು ಅಲಕ್ಷಿತ ಸಮುದಾಯಗಳನ್ನು ಚರಿತ್ರೆಯ ಭಾಗವಾಗಿ ಕಟ್ಟದೇ ಹೋದರೆ ಚರಿತ್ರೆ ಪಾರ್ಶ್ವವಾಯ ಬಡಿದ ಒಣ ಬರಹಗಳಾಗಿ ಮಾತ್ರ ಕಾಣುತ್ತವೆ.

ಈ ನಿಟ್ಟಿನಲ್ಲಿ ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಈ ಕಣ್ಮರೆಯಾದ ಮಹಿಳಾ ಪ್ರತೀನಿಧಿಕರಣ ನೆಲೆಗಳನ್ನು ಶೋಧಿಸುವುದು ಈ ಲೇಖನದ ಪ್ರಧಾನ ಆಶಯವಾಗಿದೆ.

ಕವಿರಾಜಮಾರ್ಗನ್ನು ರಾಜಕೀಯ ಪಠ್ಯವಾಗಿ ಗ್ರಹಿಸುವುದಾದರೆ, ಭಾಷಿಕವಾಗಿ ಮತ್ತು ಭೌಗೋಳಿಕವಾಗಿ ಒಂದಾಗಿಸುವ ಪ್ರಯತ್ನವನ್ನು ಅಲ್ಲಿಂದಲೇ ಗುರುತಿಸಬಹುದು. ಅಸಂಖ್ಯಾತ 'ಕನ್ನಡಂ'ಗಳನ್ನು ಒಂದಾಗಿಸುವ, ಭೌಗೋಳಿಕವಾಗಿ ಕಾವೇರಿಯಿಂದ ಗೋದಾವರಿಯವರೆಗೆ ಕಟ್ಟಿದ ಎಲ್ಲೆ ಕರ್ನಾಟಕದ ಸಾಂಸ್ಕೃತಿಕ ನೆಲೆಯೊಂದನ್ನು ಇಲ್ಲಿಂದಲೇ ಗುರುತಿಸಬಹುದು. ಬಹುಶಃ ಇದಕ್ಕೆ ಪ್ರಭುತ್ವವು ಎಡೆಮಾಡಿ ಕೊಡಲಿಲ್ಲ. ಮುಂದೆ ಯಾವ ಪಠ್ಯಗಳು ಹೀಗೆ ಮಾತನಾಡಲು ಕನ್ನಡ

ಮಾತನಾಡುವವರು ಕಾಲಾನುಕ್ರಮದಲ್ಲಿ ರಾಜಶಾಹಿ ಪ್ರಭುತ್ವದಲ್ಲಿ ಚದುರಿ ಹೋಗಿದ್ದ ಭೂಪ್ರದೇಶವನ್ನು ಬ್ರಿಟೀಷರು ನೇರವಾಗಿ ಇಲ್ಲವೇ ಪರೋಕ್ಷವಾಗಿ ಆಳ್ವಿಕೆಗೆ ಒಳಪಡಿಸಿಕೊಂಡರು.

ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಬ್ರಿಟೀಷರು ನಿಧಾನವಾಗಿ ಆಡಳಿತ ಸೂತ್ರವನ್ನು ಕೈಯಲ್ಲಿ ಹಿಡಿದು ಆಡಳಿತದ ಅನುಕೂಲಕ್ಕೆ ತಕಂಕ್ಕತೆ ಕನ್ನಡಿಗರನ್ನು ವಿಭಜಿಸಿದ್ದು ನಮ್ಮ ಕಣ್ಣ ಮುಂದೆ ಇರುವ ಸತ್ಯ. ಆದರೆ ಆಂಗ್ಲರ ಹಿಡಿತದಿಂದ ವಿವಿಧ ಕಾರಣಗಳಿಂದ ಹೊರಬರಲು ಸಣ್ಣಪುಟ್ಟ ಪಾಳೇಗಾರರ ಜನ ಸಾಮಾನ್ಯರ ಹೋರಾಟಗಳು ಪ್ರಮುಖ ಪಾತ್ರವಹಿಸಿವೆ. ಅಲ್ಲಲ್ಲಿ ಇಂತಹ ಸಣ್ಣ ಪ್ರಮಾಣದಲ್ಲಿ ಹುಟ್ಟಿಕೊಂಡ ಪ್ರತಿಭಟನೆಗಳು ಸ್ವಾಯತ್ತತೆ ದೃಷ್ಟಿಯಿಂದ ಗಮನಾರ್ಹವಾದವು. ಆದರೆ ಪೊಲೀಸ್ ವ್ಯವಸ್ಥೆಯಿಂದ ಇಂತಹ ಹೋರಾಟಗಳನ್ನು ದಮನ ಮಾಡುವುದು ಆಂಗ್ಲರಿಗೆ ಸವಾಲಾಗಿದ್ದರೂ ಯಶಸ್ವಿಯಾಗಿ ಗುರುತಿಸಿದರು.

ಹೀಗೆ ಯುದ್ಧ ರಾಜಿ ಸಂದಾನ, ಪಿತೂರಿತನ ಒಡೆದು ಆಳುವ ತಂತ್ರದಿಂದ ಕನ್ನಡ ಮಾತನಾಡುವ ಪ್ರದೇಶವನ್ನು ತಮ್ಮ ಆಳ್ವಿಕೆಗೆ ತಂದುಕೊಂಡರು. ಆದರೆ ಈ ವಿಶಾಲವಾದ ಭೂಪ್ರದೇಶವನ್ನು ಆಳ್ವಿಕೆ ಮಾಡಲು ಆಡಳಿತ ಕೇಂದ್ರಗಳಿಗೆ ಒಳಪಡಿಸಲು ಅನಿವಾರ್ಯವಾಗಿತ್ತು. ಹಾಗಾಗಿ ಕನ್ನಡ ಮಾತನಾಡುತ್ತಿದ್ದ ಭೂಪ್ರದೇಶವನ್ನು ಇಪ್ಪತ್ತೆರಡು ವಿಭಾಗಗಳಾಗಿ ಆಡಳಿತದ ಅನುಕೂಲಕ್ಕಾಗಿ ಐದು ಘಟಕಗಳನ್ನಾಗಿ ವಿಂಗಡಿಸಿದರು. (ಮುಂಬಯಿ ಕರ್ನಾಟಕ, ಮೈಸೂರು ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಕೊಡಗು) ವಿಂಗಡಣೆಯಲ್ಲಿ ಮೈಸೂರು ಕರ್ನಾಟಕವನ್ನು ಹೊರತು ಪಡಿಸಿದರೆ ಮಿಕ್ಕೆಲ್ಲಾ ಭೂಪ್ರದೇಶದಲ್ಲಿ ವಾಸಿಸುತ್ತದ್ದ. ಕನ್ನಡಿಗರ ಮೇಲೆ ಅನ್ಯಭಾಷೆಯ ಸಾಂಸ್ಕೃತಿಕ ಒತ್ತಡಗಳು ಆರಂಭವಾದವು. ಆಯಾಯ ಕೇಂದ್ರಾಡಳಿತ ಪ್ರದೇಶಗಳ ಪ್ರಭುತ್ವದ ಭಾಷೆಯಡಿಯಲ್ಲಿ ಕನ್ನಡಿಗರು ನರಳುವಂತಾಯಿತು. ಇಂತಹ ಪ್ರಭುತ್ವದ ಭಾಷಿಕ ಒತ್ತಡಗಳು ಮುಂಬಯಿ ಕರ್ನಾಟಕದ ಮೇಲೆ ಹೆಚ್ಚು ಇದ್ದವು ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಾಗೆ ನೋಡಿದರೆ ಕರ್ನಾಟಕದ ಏಕೀಕರಣದ ಹೋರಾಟವು ಆರಂಭದ ಒತ್ತಡವು ಈ ಭಾಗದಿಂದಲೇ ಶುರುವಾದದನ್ನು ಯಾರು ನಿರಾಕರಿಸಲು ಸಾಧ್ಯವಿಲ್ಲ. ಇಂತಹ ಸ್ಥಿತಿ ಮೈಸೂರು ಸಂಸ್ಥಾನಕ್ಕೆ ಒಳಪಟ್ಟ ಪ್ರದೇಶಗಳಿಗೆ ಉಂಟಾಗಿರಲಿಲ್ಲ. "ೊಂದು ನಿಗಧಿತ ಭೌಗೋಳಿಕ ಪರಿಸರದ ಜನರಿಗೆ ತಮ್ಮನ್ನು ತಾವು ಸಂವಹಿಸಿಕೊಳ್ಳಲು ಒಂದು ಭಾಷೆಯ ಜರೂರು ಇರುತ್ತದೆ. ಏಕೆಂದರೆ ಭಾಷೆಯು ಜನರ ಚೈತನ್ಯವೂ ಹೌದು. ಇಂಥ ಭಾಷಿಕ ಪ್ರಕ್ರಿಯೆಗಳು ಬೀರುವ ಪರಿಣಾಮಗಳು ಬಹಳ ಗಮನಾರ್ಹವಾದವು. ಮನೆಮಾತು ಕನ್ನಡವಾಗಿಯೂ ಸಾವ಼ಜನಿಕವಾಗಿ ಚಾಲ್ತಿಯಲ್ಲಿದ್ದ ಇನ್ನಾವುದೇ ಭಾಷೆಯನ್ನೋ ಶೈಕ್ಷಣಿಕವಾಗಿ (ಓದುವ ಬರೆಯುವ) ಮತ್ತಾವುದೋ ಭಾಷೆಯನ್ನು ಬಳಸುವುದರಿಂದ ಅನೇಕ ತೊಂದರೆಗಳು ಉಂಟಾಗುತ್ತವೆ. ಅಂತ ತೊಂದರೆಗಳನ್ನು 1956ಕ್ಕೆ ಮೊದಲು ಕನ್ನಡಿಗರು ಅನುಭವಿಸಿದ್ದು, ಎಲ್ಲಿ ವಿಭಜಿತ ಕನ್ನಡ ಪ್ರದೇಶಗಳಲ್ಲಿ ಕನ್ನಡವನ್ನು ಹೊರತುಪಡಿಸಿ ಭಿನ್ನ ಭಾಷೆಗಳೇ ಹೆಚ್ಚಿನ ಆದ್ಯತೆ ಪಡೆದಿದ್ದ ಚಾರಿತ್ರಿಕ ಘಟ್ಟ ಅದಾಗಿತ್ತು. ಇಂಥ ಭಾಷೆಗಳಲ್ಲಿ ಮರಾಠಿ, ಬಂಗಾಳಿ, ಗುಜರಾತಿ, ತಮಿಳು, ತೆಲುಗು, ಉರ್ದು, ಮಲೆಯಾಳಂ, ಇಂಗ್ಲಿಷ್ ಭಾಷೆಗಳು ಒಂದಲ್ಲಾ ಒಂದು ಭೌಗೋಳಿಕ ಪರಿಸರದಲ್ಲಿ ಪ್ರಧಾನ ಪಾತ್ರವಹಿಸಿದ್ದವು. ಇದರಿಂದ ಕನ್ನಡಿಗರಿಗೆ ತಮ್ಮ ಭಾಷೆಯನ್ನು ಒಟ್ಟು ಬೇರೆ ಭಾಷೆಯೊಂದಿಗೆ ವ್ಯವಹರಿಸುವುದು ಸಹನೀಯವಾದ ಸಂಗತಿ ಆಗಿರಲು ಅಲ್ಲದೆ ಒಡೆದು ಹೋದ ಕನ್ನಡ ಭೂಪ್ರದೇಶಗಳಲ್ಲಿನ ಗಂ್ರಥಸ್ಥ ಕನ್ನಡ ಭಾಷೆಯು ಭಿನ್ನತೆಗಳಿಂದ ಕೂಡಿತ್ತು. ಅದನ್ನು ಸಹ ಒಂದೇ ರೂಪಕ್ಕೆ ತರುವ ಅನಿವಾರ್ಯತೆಗಳು ಇದ್ದವು. ರಾಜಕೀಯವಾಗಿ ಕನ್ನಡದಲ್ಲಿ ವ್ಯವಹರಿಸುವುದು ಅನೇಕ ತೊಂದರೆಗಳನ್ನಯ ಮಾಡಿದ್ದವು. ಆಡಳಿತದೊಂದಗಿನ ಕನ್ನಡಿಗರ ಸಂವಹನ ಹೊಸ ರೀತಿಯ ತಕರಾರುಗಳನ್ನು ಸೃಷ್ಟಿ ಮಾಡುತಿತ್ತು. ಹೀಗಾಗಿ ಕನ್ನಡ ಭಾಷೆ ಇಲ್ಲಿ ಉಪಯೋಗಕ್ಕೆ ಬರುತ್ತಿರಲಿಲ್ಲ ಇಂಥ ಹತ್ತು ಹಲವು ಸಮಸ್ಯೆಗಳು ಕನ್ನಡಿಗರನ್ನು ಒಂದೇ ಭಾಷೆಯಡಿಯಲ್ಲಿ ವಿಲೀನವಾಗುವ ತುಡಿತವನ್ನು ಅಭಿವ್ಯಕ್ತಿಗೊಳ್ಳುವಂತೆ ಮಾಡಿದ್ದವು. ಈ ತುಡಿತ ಒತ್ತಡಗಳೇ ಏಕೀಕರಣ ಚಿಂತನೆಯ ಹುಟ್ಟು ಹಾಗೂ ಚಾಲನೆಗೆ ಕಾರಣವಾಗಿದ್ದು" ಎನ್ನುವ ಮಾತು ಸತ್ಯವಾಗಿದೆ.

ಕನ್ನಡ ಮಾತನಾಡುವ ಮಂದಿ ವಿವಿಧ ಭಾಷಿಕ ಕೇಂದ್ರಾಡಳಿತಕ್ಕೆ ಒಳಪಟ್ಟಾಗ ಪ್ರಭುತ್ವ ಭಾಷೆ ಮುಂಚೂಣಿಯಲ್ಲಿ ಕಾಣಿಸಿಕೊಂಡು ಜನಪದ ಭಾಷೆಗೆ ಅಸ್ತಿತ್ವ ಹೀನವಾಗತೊಡಗಿತು. ಇಂತಹ ಒತ್ತಡ ಧಾರವಾಡ ಮತ್ತು ಬೆಳಗಾವಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬಂದಿತು. ಇಂತಹದೊಂದು ದುಸ್ಥಿತಿಯನ್ನು ಶಾಂತ ಕವಿಗಳು (ಸಕ್ಕರಿಬಾಳಚಾರ್ಯ) ಕವಿತೆಯ ಮೂಲಕ ಹಿಡಿದಿಡಲು ಪ್ರಯತ್ನಿಸಿದರೂ ಎಲ್ಲಿ ನೋಡಿದರು ಮರಾಠಿಯೇ

ಕನ್ನಡ ಭಾಷಿಕ ನೆಲೆಗಳ ಮೇಲೆ ಮರಾಠಿಯು ಸಾಹಿತ್ಯಕವಾಗಿ ವ್ಯಾಪಕವಾಗಿ ಹರಡಿಕೊಂಡಿತು. ಇಂತಹ ಸಂದರ್ಭದಲ್ಲಿ ಮುದವೀಡು ಕೃಷ್ಣರಾವ್, ಮುದವೀಡು ವೆಂಕಟರಾವ್, ಆಲೂರು ವೆಂಕಟರಾವ್, ಜೋಶಿವೆಂಕಟರಾವ್, ಶೇಷಗಿರಿ ರಾಮಚಂದ್ರರಾವ್, ಕಡಪ ರಾಘವೇಂದ್ರರಾವ್, ಹೊನ್ನಾಪುರದ ಗದಿಗೆಯ್ಯ, ನರಗುಂದಕರ ರಾಜಪುರೋಹಿತ, ಅಟ್ಟಿಗೇರಿ ಪಾಟೀಲ ಸಂಗನಗೌಡ, ನವಲಗುಂದದ ಕುಲಕರ್ಣಿಕರ ವೀರಪುರುಷ ಇವರೆಲ್ಲಾ ಕರ್ನಾಟಕ ಏಕೀಕರಣಕ್ಕೆ ಹಗಲಿರುಳು ಶ್ರಮಿಸಿದರು. ಇವರ ಜೊತೆಗೆ ಸಾಮೂಹಿಕ ಸಂಘಗಳನ್ನು ಸ್ಥಾಪಿಸಿಕೊಂಡರು. ಅದರಲ್ಲಿ ಪ್ರಮುಖವಾದುವುಗಳಂದರೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಸಭಾ, ಕರ್ನಾಟಕ ಸಾಹಿತ್ಯ ಪರಿಷತ್, ಇವುಗಳು ಕರ್ನಾಟಕ ಏಕೀಕರಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವು.

ಇದೇ ಸಂದಭ□ದಲ್ಲಿ ಮಹಿಳೆಯರ ಪಾತ್ರವೇನು ಕಡಿಮೆ ಇರಲಿಲ್ಲ. ಆದರೆ ಇತಿಹಾಸ ಪುಟಗಳಲ್ಲಿ ಮಹಿಳೆಯ ಹೆಸರುಗಳು ಇಲ್ಲದೆನ್ನುವಷ್ಟು ಅಪರೂಪವಾಗಿದೆ. ಆದರೆ ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಮಹಿಳೆಯರನ್ನು ಅವರ ಜೀವನ ಚರಿತ್ರೆಗಳಿಂದ ತಿಳಿದು ಬರುತ್ತದೆಯೇ ವಿನಃ ಹೋರಾಟದ ಮುಖ್ಯವಾಹಿನಿ ಚರಿತ್ರೆಯಿಂದ ತೀರ ಕಡೆಗಣಿಸಲ್ಪಟ್ಟಿದೆ. ಅಂದಿನ ಕಾಲದಲ್ಲಿ ಮಹಿಳೆಗೆ ಸಂಪೂರ್ಣವಾಗಿ ಶಿಕ್ಷಣವನ್ನು ನಿರಾಕರಿಸಲಾಗಿದ್ದರೂ ಅಲ್ಲಲ್ಲಿ ಸ್ವಪ್ರತಿಭೆಯಿಂದ ಮೇಲೆ ಬಂದು ಇವರಂತಹದೊಂದು ರಾಜ್ಯ ಮತ್ತು ರಾಷ್ಟ್ರೀಯ ಆಂದೋಲನಗಳಲ್ಲಿ ಇತಿಮಿತಿಗಳೊಂದಿಗೆ ತೊಡಗಿಸಿಕೊಂಡರು. ಬಳ್ಳಾರಿ ಸಿದ್ದಮ್ಮ, ಜಯದೇವಿ ತಾಯಿಲಿಗಾಡೆ, ಶಾಂತದೇವಿ ಮಾಳವಾಡ, ವಿಮಳಬಾಯಿ ಮೇಲ್ಕೋಟೆ, ಮಲ್ಲವ್ವ ಬಳ್ಳಾರಿ, ಲಿಂಗಮ್ಮವ್ವ, ಸುಮಂಗಳಮ್ಮ ತೊಗರಿ ಸ್ವರಮಂಗಳಮ್ಮ, ಗೊರ್ಲೆ ರುದ್ರಮ್ಮ ಕಾಸರಗೋಡು, ಸರಸ್ವತಿಬಾಯಿ, ಸುಹಾಸಿನಿ ಬಂಡಾರಿ, ಕಮಲಾಶೆಟ್ಟಿ, ರಾದಾಕಾಮತ್ ಬೆಳಗಾವಿ, ಆಶಾತಾಯಿ, ಡಾ. ಮಂದಾಕಿನಿ ಪಟ್ಟಣ, ಸಾವಿತ್ರಿದೇವಿ ಹಳ್ಳಿಕೇರಿ, ಶಕುಂತಲಾ ಕುರ್ತುಕೋಟಿ, ವೀರಮ್ಮ ಪಾಟೀಲ, ಭಾಗೀರಥಿ ಪಾಟೀಲ, ಶಾಂದೇವಿಜತ್ತಿ, ಬಸಮ್ಮ ಉಪ್ಪಿನ, ಚಂಪಾತಾಯಿ ಜೋಗಲೆ, ನಾಗಮ್ಮ ವೀರನ ಗೌಡಪಾಟೀಲ. ಲೀಲಾವತಿ ಮಾಗಡಿ, ಗಂಗಮ್ಮ ಗುಡ್ಡೆಪ್ಪಹಳ್ಳಿಕೇರಿ, ಪ್ರಮೀಳಾ ತಾಯಿಕಾಮತ್, ಸರೋಜಿನಿಶಿಂತ್ರಿ, ಸರಸ್ವತಿಗವ್ಡರ, ದೇವಕ್ಕ ರಮಾನಂದ ಚನಂನ್ಗಿ, ಸಂಗಮ್ಮ ಪದ್ಮಾವತಿ ದೇಸಾಯಿ, ಚಂದ್ರಾಬಾಯಿ ಚೆನ್ನಪ್ಪವಾಲು, ಚೆನ್ನಮ್ಮ ವೇದಮೂರ್ತಿ ಇಟಗಿ, ಗವ್ರವ್ವಸಾವಳಗಿ, ಶಾಂತಬಾಯಿ ವೆಂಕಟೇಶ ಮಟದ, ಪಾರ್ವತಿಬಾಯಿ ದೇಶಪಾಂಡೆ. ಅಬ್ಬಕ್ಕ ಬಳಿಗಾವೆ. ಲಕ್ಷ್ಮಿದೇವಿ ಪಾಟೀಲ, ಉಮಾದೇವಿ ಟೊಪಣ್ಣನವರ, ಉಮಾದೇವಿ ಕುಂದಾಪುರ, ಕಾಡಮ್ಮ, ಗದಿಗೆವ್ವಕುರುಹಟ್ಟಿ, ಕೃಷ್ಣಾಬಾಯಿ ಪಣಜೀಕರ, ಗರ್ವವ್ವವಾರದೆ, ಪಂಚವ್ವಬಾಯಿವಾರದೆ, ಬಸವ್ವಬಾಯಿವಾರದ, ಬಸವಲಿಂಗಮ್ಮ, ಬಾಳೆಕುಂದ್ರಿ, ಬಳ್ಳಾರಿ ಯಶೋಧಮ್ಮ. ಈ ಮಹಿಳೆಯರಲ್ಲಿ ಕೆಲವರು ಲೇಖಕಿ ಯಾರು? ಸಮಾಜ ಸೇವಾ ಕರ್ತರು, ರಾಜಕಾರಣಿಗಳು, ಹೋರಟಗಾರರ ಇದ್ದರು. ಅಂದಿನ ಮಹಿಳೆಯವರು ಒಂದಲ್ಲಾ ಒಂದು ರೀತಿಯಲ್ಲಿ ಹೋರಾಟದಲ್ಲಿ ತಡಗಿಸಿಕೊಂಡರು ರಾಷ್ಟ್ರವ್ಯಾಪಿಯಲ್ಲಿ ತಮ್ಮನ್ನು ಬಿಡುಗಡೆಗೊಳಿಸಿಕೊಳ್ಳಲು ಹೋರಾಡಿದಂತೆ, ಭಾಷಿಕವಾಗಿ ಒಂದಾಗಲು ಅವಿರತ ಶ್ರಮವಹಿಸಿದರು. ಈ ಮಹಿಳೆಯರಲ್ಲಿ ಸಾಹಿತ್ಯ ಮತ್ತು ಶೈಕ್ಷಣಿಕ ಮಹಿಳಾ ಸಬಲೀಕರಣದಲ್ಲಿ ತೊಡಗಿಸಿಕೊಂಡಿದ್ದ ಸೊಲ್ಲಾಪುರದ ಜಯದೇವಿತಾಯಿ ಲಿಗಾಡೆ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಬಳ್ಳಾರಿ ಸಿದ್ಧಮ್ಮರವರನ್ನು ಪ್ರಧಾನವಾಗಿ ಗುರುಸಬಹುದು.

ತಾಯಿ ಜಯದೇವಿ ಲಿಗಾಡೆಯವರು ಮಹರಾಷ್ಟ್ರಕ್ಕೆ ಸೇರಿದ ಮಹಾರಾಷ್ಟ್ರಕ್ಕೆ ಸೇರಿರುವ ಸೊಲ್ಲಾಪುರದವರು. ಮನೆ ಮಾತು ಮರಾಠಿಯಾದದ್ದು ಕನ್ನಡ ಭಾಷಿಕರನ್ನು ಒಂದುಗೂಡಿಸಲು ಹಗಲಿರುಳು ಶ್ರಮವಹಿಸಿದರು. ಶ್ರೀಮಂತ ಮನೆತನದಲ್ಲಿ ಹುಟ್ಟಿ

ಬೆಳೆದ ಲಿಗಾಡೆಯವರು ಮಹಿಳೆಯರಿಗೆ ಸಮಾಜಸೇವೆ ಮತ್ತು ಸಾಹಿತ್ಯಸೇವೆಗೆ ತಮ್ಮನ್ನು ಅರ್ಪಿಸಿಕೊಂಡವರು. ನಾಲ್ಕನೇ ತರಗತಿಯವರಿಗೂ ಓದಿದ ಲಿಗಾಡೆಯವರು ಶಾಲೆ ಕಲಿತದ್ದು ಮರಾಠಿ ಭಾಷೆಯಲ್ಲೆ ಅವರು ಕನ್ನಡ ಕಲಿತದ್ದು ಮೂರು ಮಕ್ಕಳ ತಾಯಿ ಆದ ನಂತರ ಮಹಿಳೆಯರ ಶಿಕ್ಷಣಕ್ಕಾಗಿ ಕನ್ಯಾಶಾಲೆಯನ್ನು ತೆರೆದವರು ಮಹಿಳೆಯ ಒಗ್ಗೂಡಿವಿಗಾಗಿ 'ಅಕ್ಕನ ಬಳಗ' ಕಟ್ಟಿದವರು. ಕನ್ನಡ ವಿಷಯ ಬಂದಾಗ ಕಟ್ಟಿಹಾಕಿ ಹೋರಾಟಕ್ಕೆ ನಿಂತವರು. ಅದು ಅವರ ಸಾಹಿತ್ಯದಲ್ಲೂ ನಾವು ಕಾಣಬಹುದು.

"ಕನ್ನಡ ನಮ್ಮ ನುಡಿ ಸಣ್ಣಾಗಿ ಸೊರಗಾದ
ಅಣ್ಣ ಬಸವಣ್ಣ ನುಡಿಸಲು-ಬಾಬೇಗ
ಕಣ್ಣ ತೆರಿಬಾರೋ ಕುರುಡರ"

ಅಂತಹೇಳಿ ಕನ್ನಡ ಭಾಷಿಕರನ್ನು ಸಾಹಿತ್ಯದ ಮೂಲಕ ಎಚ್ಚರಿಸಿದರು. ಕರ್ನಾಟಕ ಏಕೀಕರಣಕ್ಕೆ ಮೈಸೂರು ಭಾಗದ ಜನಕ್ಕೆ ಆರಂಭದಲ್ಲಿ ಸ್ಪಂದಿಸದ ಕಾರಣ ಅವರನ್ನು ಉದ್ದೇಶಿಸಿ 1952ರಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೇಲೆ ನಿಂತು ಮಾತನಾಡಿದ ಮಾತುಗಳು ಚರಿತಾರ್ಹ.

ನಡು ನಾಡಿನಣ್ಣಂದಿರೆ, ಗಡಿ ಭಾಗದವರೀಗೆ
ಕಡೆಗಣೇಲಿ ನೋಡಬ್ಯಾಡರಿ
ಕಡೆಗಣ್ಣೇಲಿ ನೋಡಬ್ಯಾಡರಿ ನಾವೆಲ್ಲ
ಒಡಹುಟ್ಟಿದ ಕನ್ನಡ ಮಕ್ಕ'ಳು.
ಗಡಿನಾಡಾದಲ್ಲಿ ಕಡಿಮಿಲ್ಲ ಕನ್ನಡದ
ಒಡವೆಯ ಧರಿಸುವ ಪದಗ'ಳ
ಕನ್ನಡ ತಾಯಿಯ ಕೊರಳಿಗೆ!!

ಎಂದು ಹೇಳುತ್ತಾ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂದು ಕೇವಲ ಹಾಡುವುದೇಕೆ? ನಿಸ್ವಾರ್ಥ ಮನಸ್ಸಿನಿಂದ ಕನ್ನಡಕ್ಕಾಗಿ ಹೋರಾಡುವ ಧೈರ್ಯ ಇದೆಯಾ? ನಾಡಿನವರು ಮನೆಯಲ್ಲಿ ಇರುವವರು ನೀವು ಗಡಿನಾಡ ಕನ್ನಡಿಶಿ ನಾನು, ಗಡಿನಾಡಿನಲ್ಲಿರುವ ಕನ್ನಡಿಗರ ತಳಮಳ ನೀವೆಂತು ಅರಿಯುವಿರಿ. ಸೊಲ್ಲಾಪುರದಗಡಿ ನಾಳೆ ಬೇಲೂರಿಗೂ ಬಂದೀತು. ಕರ್ನಾಟಕ ಏಕೀಕರಣಕ್ಕೆ ನಾನಂತೂ ನನ್ನ ತತಿ ಕೊಡಲು ಸಿದ್ಧಳಿರುವೆ ಎಂದು ಎಚ್ಚರಿಕೆಯನ್ನು ನೀಡುತ್ತಾರೆ. ಮುಂದುವರೆದಂತೆ ಸೊಲ್ಲಾಪುರದಲ್ಲಿ ಕನ್ನಡ ಕೋಟಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಕರ್ನಾಟಕ ಏಕೀಕರಣಕ್ಕೆ ಗಡಿನಾಡ ಕನ್ನಡಿಗರನ್ನು ಉರಿದುಂಬಿಸಿದ ವೀರ ಕನ್ನಡ ಮಾತೆ ಜಯದೇವಿಯತಾಯಿ ಲಿಗಾಡೆಯವರು.

ಕರ್ನಾಟಕ ಏಕೀಕರಣಕ್ಕೆ ಅದರಗುಂಟಿ ಶಂಕರಗೌಡ ಪಾಟೀಲರು ಹಂಪಿಯಲ್ಲಿ ಉಪವಾಸ ಸತ್ಯಾಗ್ರಹ ಆರಂಬಿಸಿದಾಗ, ಲಿಗಾಡೆಯವರು ಅನಾರೋಗ್ಯ ನಿಮಿತ್ತ ಮುಂಬಯಿ ಆಸ್ಪತ್ರೆಯಲ್ಲಿದ್ದರೂ ಅಲ್ಲಿಂದಲ್ಲೇ ರಕ್ತದಲ್ಲಿ ಪತ್ರಕ್ಕೆ ಸಹಿ ಮಾಡಿ ಹೋರಾಟಕ್ಕೆ ಬೆಂಬಲವನ್ನು ಸೂಚಿಸಿದರು. 1955ರಲ್ಲಿ ಹುಬ್ಬಳ್ಳಿಗೆ ಬಂದಿದ್ದ ಇಂದಿರಾಗಾಂಧಿಯವರನ್ನು ಕಂಡು ತಾಯಿ ಲಿಗಾಡೆಯವರು ಬಳ್ಳಾರಿ, ಅಕ್ಕಲಕೋಟೆ, ಸೊಲ್ಲಾಪುರ, ಬೀದರ್ ಜತ್ತಗಡ ಹಿಂಗ್ಲಜ ಮಡಕಶಿರಾ, ಕಾಸಗೋಡು, ನೀಲಗಿರಿ ಮೊದಲಾದ ಕನ್ನಡ ಪ್ರದೇಶಗಳನ್ನು ಕರ್ನಾಟಕಕ್ಕೆ ಸೇರಿಸುವಂತೆ ಒತ್ತಾಯಿಸುವ ಮನವಿ ಪತ್ರವನ್ನು ಸಲ್ಲಿಸಿದ್ದರು.

ಅಖಿಲ ಕರ್ನಾಟಕ ಏಕೀಕರಣ ಸಮಿತಿಗೆ ಉಪಾಧ್ಯಕ್ಷರಾಗಿ ಗಡಿನಾಡಿನಾದ್ಯಂತ ಸಂಚರಿಸಿ "ಸತ್ತಂತವರನ್ನು ಬಡಿದೆಬ್ಬರಿಸಿ ಹೊಟ್ಟೆಯ ಕಿಚ್ಚಿಗೆ ಕಣ್ಣೀರುಸುರಿಸಿದ" ತಾಯಿ ಲಿಗಾಡೆಯವರು ಕರ್ನಾಟಕದ ಏಕೀಕರಣದ ಇತಿಹಾಸದಲ್ಲಿ ಅಜರಮರವಾದ ಹೆಸರು.

ಉತ್ತರ ಕರ್ನಾಟಕ ಏಕೀಕರಣದ ಹೋರಾಟದಲ್ಲಿ ದುಮಕಿದ್ದಾಗ ಮಧ್ಯ ಕರ್ನಾಟಕವು ನಿದ್ರೆಯಲ್ಲಿತ್ತು. ರಾಜ್ಯ ಪುನರ್ ವಿಂಗಡಣೆ ಆಯೋಗದಂತೆ ಬಳ್ಳಾರಿಯು ಕರ್ನಾಟಕವು ಕೈಬಿಟ್ಟು ಆಂದ್ರ ಸೇರುತ್ತಿದ್ದಾಗ ಅದರ ವಿರುದ್ಧ ಹೋರಾಟ ಮಾಡಿದ ದಿಟ್ಟ ಮಹಿಳೆ ಬಳ್ಳಾರಿ ಸಿದ್ಧಮ್ಮನವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಬಳ್ಳಾರಿ ಸಿದ್ಧಮ್ಮನವರು ಶಿವಪುರದ್ವಜ ಸತ್ಯಾಗ್ರಹ ಮತ್ತು ವಿಧುರಾಶತ್ವ ಧ್ವಜಸತ್ಯಾಗ್ರಹದಲ್ಲ ಪಾಲ್ಗೊಂಡಿದ್ದರು. ಉತ್ತರ ಕರ್ನಾಟಕದಲ್ಲಿ ಏಕೀಕರಣದ ಬಿಸಿ ಹೆಚ್ಚಾಗಿದ್ದಿತು. ಮೈಸೂರು ಭಾಗಕ್ಕೆ ಅದು ತಟ್ಟರಲಿಲ್ಲ. ಮೈಸೂರು ಪ್ರದೇಶ ಕಾಂಗ್ರೇಸ್ ಉಪ ಸಮಿತಿಯ ಕಾರ್ಯಕಾರಿ ಸಮಿತಿಯು ಏಕೀಕರಣದ ಬಗ್ಗೆ ಮೌನ ವಹಿಸಿದ್ದ ಬಗ್ಗೆ ಬಳ್ಳಾರಿ ಸಿದ್ಧಮ್ಮನವರು ತೀವ್ರ ಅಸಮದಾನಗೊಂಡು ಏಕೀಕರಣವನ್ನು ಮುಖ್ಯ ಸಮಸ್ಯೆಯೆಂದು ಪರಿಗಣಿಸಬೇಕೆಂದು ಹೋರಾಟಕ್ಕೆ ಇಳಿದರು. ಕನ್ನಡ ನಾಡಿನಲ್ಲಿ ದೇಶದ ಧ್ವಜವನ್ನು ಹಾರಿಸಿ ಮೊಟ್ಟಮೊದಲನೆಯದಾಗಿ ಜೈಲು ಸೇರಿದ ಮಹಿಳೆ ಸಿದ್ಧಮ್ಮನವರು.

ಹೀಗೆ ಕರ್ನಾಟಕ ಏಕೀಕರಣ ಮತ್ತು ಸ್ವಾತಂತ್ರ್ಯ ಚಳವಳಯಲ್ಲಿ ಮಹಿಳೆಯರು ಪರೋಕ್ಷವಾಗಿ ಮತ್ತು ಪ್ರತ್ಯೇಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ ಇವರು ಇತಿಹಾಸ ಮಾಲಿಕೆಯಲ್ಲಿ ಕಾಣದೇ ಹೋಗಿರುವುದು ನೋವಿನ ಸಂಗತಿ.

**ಆಕರ ಗ್ರಂಥಗಳು**


1. ಕರ್ನಾಟಕ ಏಕೀಕರಣ ಇತಿಹಾಸ ಹೆಚ್.ಎಸ್. ಗೋಪಾಲದಾಸ್.
2. ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ-ಡಾ.ಸಿ.ಆರ್. ಗೋವಿಂದರಾಜು
3. ಕನ್ನಡ ಕಾವಲು-ಪಾಟೀಲಪುಟ್ಟಪ್ಪ.
4. ಕರ್ನಾಟಕ ನಾಮಕರಣ ಮಹೋತ್ಸವ ಸಂಪುಟ-ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
5. ಕನ್ನಡ-ಕನ್ನಡಿಗ-ಕರ್ನಾಟಕ-ಮಸ್ತಕ ಪ್ರಾಧಿಕಾರ.
6. ಜಯದೇವಿತಾಯಿ ಲಿಗಾಡೆ-ನಂಜನಗೂಡು ತಿರುಮಲಾಂಬಾ ಸಾಹಿತ್ಯ ಕೃಷಿ-ನಾ. ಡಾ. ಜಯಶ್ರೀ ಹಂಪೆ.
7. ಕರ್ನಾಟಕ ಏಕೀಕರಣ ಶಿಲ್ಪಿಗಳು-ಸಿ.ಕೆ. ರಾಮೇಗೌಡ.